**2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಹಾಗೂ ವಿಶೇಷ ನ್ಯಾಯಾಲಯ ದಾವಣಗೆರೆ .**

SC. No.165-2022

ದೋ.ಸಾ. 13
ಫ್ರಾ.ಸಾ. 7
ಪ್ರ.ವ.ಬೊ.ದಿನಾಂಕ. 20-09-2025

| | | |
|---|---|---|
| ಹೆಸರು ಶ್ರೀ/ ಶ್ರೀ ಮತಿ. | - | ಸರಸ್ವತಿ |
| ತಂದೆ / ಗಂಡನ ಹೆಸರು | - | ಪ್ರಶಾಂತ |
| ವಯಸ್ಸು | - | 38 |
| ಉದ್ಯೋಗ | - | ವ್ಯಾಪಾರ |
| ವಾಸ ಸ್ಥಳ | - | ದಾವಣಗೆರೆ |

ಮುಖ್ಯವಿಚಾರಣೆಃ - ಮಾನ್ಯ ಸರ್ಕಾರಿ ಅಭಿಯೋಜಕರಿಂದ

ನಾನು ದಾವಣಗೆರೆಯಲ್ಲಿ ಕೆಬಿ ಎಕ್ಸ್‌ಟೆನ್ಸನ್ ನಲ್ಲಿ ವಾಸವಾಗಿದ್ದು, ಶಿವಪ್ಪ ಸರ್ಕಲ್ ಬಳಿ ಎಸ್ ಎಸ್ ಜನರಲ್ ಸ್ಟೋರ್ ಎಂಬ ಅಂಗಡಿಯನ್ನು ಇಟ್ಟುಕೊಂಡು ಕಳೆದ ಏಳು ವರ್ಷಗಳಿಂದ ಜೀವನ ನಡೆಸುತ್ತಿದ್ದೇನೆ. ಸದರಿ ಅಂಗಡಿಯಲ್ಲಿ ಪುಸ್ತಕಗಳು, ಗೊಂಬೆಗಳು, ಮನೆಗೆ ಬೇಕಾದ ದಿನಸಿಗಳು ಹಾಗೂ ಇನ್ನಿತರ ವಸ್ತುಗಳನ್ನು ಇಟ್ಟುಕೊಂಡು ವ್ಯಾಪಾರ ಮಾಡುತ್ತ ಜೀವನ ನಡೆಸುತ್ತಿದ್ದೇನೆ.

ಕಳೆದ 4-5 ವರ್ಷಗಳ ಹಿಂದೆ ಆರೋಪಿತರಿಬ್ಬರು ನನ್ನ ಅಂಗಡಿಗೆ ಬಂದು ಒಂದು ಚಾಕುವನ್ನು ಖರೀದಿಸಿಕೊಂಡು ಹೋಗಿದ್ದು, ನಂತರ ಸಂಜೆ ಸಮಯದಲ್ಲಿ ಪೋಲೀಸರು ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ಕರೆದುಕೊಂಡು ಬಂದಿದ್ದು, ಆಗ ಆರೋಪಿತರೇ ನನ್ನ ಅಂಗಡಿಯಲ್ಲಿ ಚಾಕುವನ್ನು ಖರೀದಿಸಿರುವುದಾಗಿ ಹೇಳಿರುತ್ತಾರೆ. ನಂತರ ಪೋಲೀಸರು ಸದರಿ ಚಾಕುವನ್ನು ನನ್ನ ಅಂಗಡಿಯಲ್ಲಿಯೇ ಖರೀದಿಸಿದ್ದಾರಾ ಎಂದು ವಿಚಾರಿಸಿದ್ದು, ಆಗ ನಾನು ಖರೀದಿಸಿದ್ದಾರೆ ಎಂದು ಹೇಳಿದ್ದಲ್ಲದೇ, ಅವರು ಸಹಜವಾಗಿ ತರಕಾರಿ ಕೊಚ್ಚಲು ತೆಗೆದುಕೊಂಡು ಹೋಗಲು ಬಂದಿದ್ದಾರೆ ಎಂದು ಭಾವಿಸಿ ನಾನು ನೀಡಿದ್ದೆ ಎಂದು ಪೋಲೀಸರಿಗೆ ಹೇಳಿದ್ದೆ ಎಂದು ನುಡಿದಿರುತ್ತಾರೆ. ಆ ಸಮಯದಲ್ಲಿ ಪೋಲೀಸರು ಯಾವ ತರಹದ ಚಾಕು ನೀಡಿದ್ದೀಯಾ ಎಂದು ಪ್ರಶ್ನಿಸಿದ್ದು, ನಂತರ ನಾನು ಅಂಗಡಿಯಲ್ಲಿ ಇದ್ದ ಚಾಕುವನ್ನು ತೋರಿಸಿ ಇದೆ ತರನಾದ ಚಾಕು ಖರೀದಿಸಿದ್ದಾರೆ ಎಂದು ಹೇಳಿರುತ್ತೇನೆ. ನಂತರ ಪೋಲೀಸರು ಅದೇ ರೀತಿಯಾದ ಇನ್ನೊಂದು ಚಾಕುವನ್ನು ಕೂಡ ಖರೀದಿಸಿರುತ್ತಾರೆ.

ಸಾಕ್ಷಿಗೆ ಈಗ ಮು.ಮಾ.5 ಚಾಕುವನ್ನು ತೋರಿಸಲಾಗಿದ್ದು, ಸಾಕ್ಷಿಯು ತಾನು ಇದೇ ತರನಾದ ಚಾಕುವನ್ನು ಆರೋಪಿತರಿಗೆ ಮಾರಾಟ ಮಾಡಿದ್ದೆ ಎಂದು ನುಡಿದಿರುತ್ತಾರೆ. ಅಲ್ಲದೇ ಸಾಕ್ಷಿಯು ನಿ.ಪಿ.7 ಮತ್ತು 8 ರಲ್ಲಿ ತನ್ನ ಅಂಗಡಿಯನ್ನು ಮತ್ತು ಅದರಲ್ಲಿ ತನ್ನ ಇರುವಿಕೆಯನ್ನು ಹಾಗೂ ಪೋಲೀಸರು, ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. ಅಲ್ಲದೇ ಪೋಲೀಸರು ತದನಂತರ ನನ್ನ ಸಹಿಯನ್ನು ಕೂಡ ಪಡೆದುಕೊಂಡಿರುತ್ತಾರೆ. ಸಾಕ್ಷಿಯು ನಿ.ಪಿ.6 ರಲ್ಲಿ ಇರುವ ತನ್ನ ಸಹಿಯನ್ನು ಗುರುತಿಸಿದ್ದು, ಅದನ್ನು ನಿ.ಪಿ.6(ಬಿ) ಎಂದು ಗುರುತಿಸಲಾಯಿತು.

**ಪಾಟೀಸವಾಲುಃ ಆರೋಪಿತರ ಪರ ವಕೀಲರಿಂದ.**

ಸದರಿ ಎಸ್ ಎಸ್ ಜನರಲ್ ಸ್ಟೋರ್ ನನ್ನ ಹೆಸರಿನಲ್ಲಿ ಇದೆ ಎಂದು ತೋರಿಸುವ ಯಾವುದೇ ದಾಖಲಾತಿಯನ್ನು ನಾನು ಪೋಲೀಸರಿಗೆ ನೀಡಿದ್ದು ಇರುವುದಿಲ್ಲ. ನನ್ನ ಅಂಗಡಿಗೆ ಯಾವುದೇ ಸಿಸಿ ಟಿವಿ

ಅಳವಡಿಸಿದ್ದು ಇರುವುದಿಲ್ಲ. ಅದೇ ರೀತಿ ನನ್ನ ಅಂಗಡಿಯ ಅಕ್ಕಪಕ್ಕದಲ್ಲಿ ಇರುವ ಮನೆ ಅಥವಾ ಅಂಗಡಿಗಳಿಗೆ ಸಿಸಿ ಟಿವಿ ಹಾಕಲಾಗಿದೆಯೋ ನನಗೆ ತಿಳಿದಿಲ್ಲ. ಸಹಜವಾಗಿ ಪ್ರತಿನಿತ್ಯ ನನ್ನ ಅಂಗಡಿಗೆ ಗ್ರಾಹಕರು ಬಂದು ಹೋಗುತ್ತಿದ್ದು, ಸಹಜವಾಗಿ ಪ್ರತಿದಿನ 50 ರಷ್ಟು ಗ್ರಾಹಕರು ಬರುತ್ತಾರೆ. ನನಗೆ ಆರೋಪಿತರು ಯಾವ ದಿನಾಂಕದಂದು ನನ್ನ ಅಂಗಡಿಗೆ ಬಂದು ಮು.ಮಾ.5 ಖರೀದಿಸಿರುತ್ತಾರೆ ಎಂದು ತಿಳಿದಿಲ್ಲ. ಆದರೆ ಸದರಿ ಘಟನೆ ನನ್ನ ಅಂಗಡಿ ಇಟ್ಟ ಬಳಿಕ ಪ್ರಥಮ ಬಾರಿಗೆ ಆದ ಕಾರಣ ನನಗೆ ವಿಷಯ ನೆನಪಿರುತ್ತದೆ ಎಂದು ನುಡಿದಿರುತ್ತಾರೆ. ಪ್ರತಿನಿತ್ಯ ನನ್ನ ಅಂಗಡಿಗೆ 50 ಕ್ಕಿಂತಲೂ ಹೆಚ್ಚು ಗ್ರಾಹಕರು ಬಂದು ಹೋಗುತ್ತಿರುವ ಕಾರಣ ಇದೇ ಆರೋಪಿತರು ಬಂದು ಖರೀದಿಸಿ ಹೋಗಿದ್ದಾರೆ ಎಂದು ಹೇಳುವುದು ಕಷ್ಟವಾಗುತ್ತದೆ ಎಂದರೆ ಸರಿ.

ಸಾಕ್ಷಿಗೆ ಈಗ ಮು.ಮಾ.5 ಚಾಕುವನ್ನು ತೋರಿಸಿ ಇದೇ ಚಾಕುವನ್ನು ಸದರಿ ದಿನ ಪೋಲೀಸರು ಬಂದು ನಮ್ಮ ಅಂಗಡಿಯಿಂದ ಖರೀದಿಸಿಕೊಂಡು ಹೋದ ಚಾಕುವೇ ಎಂದು ಪ್ರಶ್ನಿಸಲಾಗಿದ್ದು, ಸಾಕ್ಷಿಯು ಹೌದು ಎಂದು ನುಡಿದಿರುತ್ತಾರೆ. ಆರೋಪಿತರಿಗೆ ಚಾಕು ನೀಡಿದ ಕುರಿತು ನಾನು ಯಾವುದೇ ಬಿಲ್ಲನ್ನು ನೀಡಿರುವುದಿಲ್ಲ ಎಂದರೆ ಸರಿ. ಸದರಿ ದಿನ ನಾನು ಸಹಿ ಮಾಡಿದ ನಿ.ಪಿ.6 ದಾಖಲೆಯನ್ನು ಪೋಲೀಸರು ಮೊದಲೇ ಬರೆದುಕೊಂಡು ಬಂದಿದ್ದರೋ ಅಥವಾ ನನ್ನ ಅಂಗಡಿಯಲ್ಲಿಯೇ ಬರೆದಿರುತ್ತಾರೋ ಈಗ ನನಗೆ ನೆನಪಿರುವುದಿಲ್ಲ. ನಿ.ಪಿ.6 ರಲ್ಲಿ ಏನು ಬರೆಯಲಾಗಿದೆ ಎಂದು ನನಗೆ ತಿಳಿದಿರುವುದಿಲ್ಲ. ಆರೋಪಿತರು ನನ್ನ ಅಂಗಡಿಗೆ ಬಂದು ಚಾಕು ಖರೀದಿಸಿಕೊಂಡು ಹೋಗಿದ್ದಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮು.ಮಾ.5 ರ ರೀತಿಯ ಚಾಕು ಸಹಜವಾಗಿ ಎಲ್ಲಾ ಅಂಗಡಿಗಳಲ್ಲಿ ದೊರೆಯುತ್ತವೆ ಎಂದರೆ ಸರಿ. ನಾನು ಆ ದಿನ ಪೋಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ ಎಂದರೆ ಸಾಕ್ಷಿಯು ಪೋಲೀಸರು ಆ ದಿನ ಕೇಳಿದ್ದರು ನಾನು ಹೇಳಿದ್ದೇನೆ ಎಂದು ನುಡಿದಿರುತ್ತಾರೆ. ಸಾಕ್ಷಿಗೆ ಈಗ ಆಕೆಯ 161 ಹೇಳಿಕೆಯನ್ನು ತೋರಿಸಿ ಆ ರೀತಿಯಾಗಿ ಪೋಲೀಸರು ನನ್ನ ಅಂಗಡಿಯಲ್ಲಿ ಬೆರಳಚ್ಚು ಮಾಡಿಕೊಂಡಿದ್ದಾರ ಎಂಬ ಪ್ರಶ್ನೆಗೆ ಸಾಕ್ಷಿಯು ಆ ರೀತಿಯಾಗಿ ಬೆರಳಚ್ಚು ಮಾಡಿಕೊಂಡಿಲ್ಲ ಎಂದು ನುಡಿದಿರುತ್ತಾರೆ.

**ಪಾಟೀಸವಾಲುಃ ಮಾನ್ಯ ಅಭಿಯೋಜಕರಿಂದಃ**

(ಈ ಹಂತದಲ್ಲಿ ಅಭಿಯೋಜಕರು ಮು.ಮಾ.5 ರ ಕುರಿತು ಮುಂದಿನ ಪಾಟೀಸವಾಲಿಗೆ ಕೋರಿಕೊಂಡಿದ್ದು, ಕೋರಿಕೆ ಸಮಂಜಸವಾದ ಕಾರಣ ನೀಡಲಾಗಿರುತ್ತದೆ.)

ಮು.ಮಾ.5 ಚಾಕುವನ್ನು ಆರೋಪಿತರು ಆ ದಿನ ನನ್ನ ಅಂಗಡಿಯಲ್ಲಿ ಖರೀದಿಸಿಕೊಂಡು ಹೋದ ಚಾಕು ಎಂದರೆ ಸರಿ. ಸದರಿ ದಿನ ಪೋಲೀಸರು ನನ್ನ ಅಂಗಡಿಗೆ ಬಂದು ಚಾಕು ಖರೀದಿಸಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ದಿನ ಪೋಲೀಸರು ಯಾವುದೇ ಚಾಕುವನ್ನು ಖರೀದಿಸದೇ ಇದ್ದರೂ ಕೂಡ ಖರೀದಿಸಿದ್ದಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ . ಹೇ. ಕೇ. ಸರಿಯಾಗಿದೆ.

PRAVEEN KUMAR RAGHAV NAIK
Digitally signed by PRAVEEN KUMAR RAGHAV NAIK
Date: 2025.09.22 10:59:03 +0530

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದಾವಣಗೆರೆ.

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಹಾಗೂ ವಿಶೇಷ ನ್ಯಾಯಾಲಯ ದಾವಣಗೆರೆ .

SC. No.165-2022

ದೋ.ಸಾ. 12
ಪ್ರಾ.ಸಾ. 6
ಪ್ರ.ವ.ಬೊ.ದಿನಾಂಕ. 20-09-2025

| | | |
|---|---|---|
| ಹೆಸರು ಶ್ರೀ/ ಶ್ರೀ ಮತಿ. | - | ಗಣೇಶ |
| ತಂದೆ / ಗಂಡನ ಹೆಸರು | - | ಚೆನ್ನಸ್ವಾಮಿ |
| ವಯಸ್ಸು | - | 50 |
| ಉದ್ಯೋಗ | - | ವ್ಯಾಪಾರ |
| ವಾಸ ಸ್ಥಳ | - | ದಾವಣಗೆರೆ |

ಮುಖ್ಯವಿಚಾರಣೆಃ - ಮಾನ್ಯ ಸರ್ಕಾರಿ ಅಭಿಯೋಜಕರಿಂದ

ನಾನು ಕಳೆದ 25 ವರ್ಷಗಳಿಂದ ದಾವಣಗೆರೆಯಲ್ಲಿ ವ್ಯಾಪಾರ ಮಾಡಿಕೊಂಡು ಜೀವನ ನಡೆಸುತ್ತಿದ್ದೇನೆ. ಅಂದರೆ ನಾನು ಜೆಸಿಬಿ ವಾಹನವನ್ನು ಇಟ್ಟುಕೊಂಡು ಜೀವನ ನಡೆಸುತ್ತಿದ್ದೇನೆ. ನಾನು ಸಹಜವಾಗಿ ನನ್ನ ಜೆಸಿಬಿ ವಾಹನವನ್ನು ದಾವಣಗೆರೆಯ ತ್ರಿಶೂಲ್ ಟಾಕೀಸಿನ ಬಳಿ ಇರುವ ಖಾಲಿ ಜಾಗದ ಬಳಿ ನಿಲ್ಲಿಸುತ್ತೇನೆ.

ಸುಮಾರು 4 ವರ್ಷಗಳ ಹಿಂದೆ ನಾನು ನನ್ನ ಜೆಸಿಬಿ ನಿಲ್ಲಿಸುವ ಸ್ಥಳದ ಬಳಿ ಪೋಲೀಸರು ಬಂದು ವಿಚಾರಣೆ ನಡೆಸುತ್ತಿದ್ದರು. ಸದರಿ ಸ್ಥಳದಲ್ಲಿ ಪೋಲೀಸರು ಗಲಾಟೆಯಾಗಿದೆ ಎಂದು ವಿಚಾರಣೆಗೆ ಬಂದಿರುತ್ತಾರೆ. ನನಗೆ ನ್ಯಾಯಾಲಯದ ಮುಂದೆ ಇರುವ ಆರೋಪಿತರ ಪರಿಚಯ ಇರುವುದಿಲ್ಲ. ನನಗೆ ಈ ಪ್ರಕರಣದ ವಿಷಯ ತಿಳಿದಿರುವುದಿಲ್ಲ. ಆರೋಪಿತರು ನನ್ನ ಸಮಕ್ಷಮ ಪ್ರಾ.ಸಾ.1 ರವರಿಗೆ ಯಾವುದೇ ತೊಂದರೆಯನ್ನು ನೀಡಿದ್ದು ಇರುವುದಿಲ್ಲ. ಈ ಕುರಿತಾಗಿ ನಾನು ಪೋಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ. ಅಲ್ಲದೇ ನನಗೆ ಈಗ ತೋರಿಸುತ್ತಿರುವ ಮು.ಮಾ.1, 3, 5 ಮತ್ತು 7 ರ ಕುರಿತು ತಿಳಿದಿರುವುದಿಲ್ಲ.

( ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)

ಪಾಟೀಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ.

ದಿಃ 16-10-2020 ರಂದು ಮಧ್ಯಾಹ್ನ 2-00 ಗಂಟೆ ಸಮಯದಲ್ಲಿ ನಾನು ನನ್ನ ಜೆಸಿಬಿ ವಾಹನ ಇರುವ ಸ್ಥಳಕ್ಕೆ ತೆರಳಿ ವಾಹನದ ರಿಪೇರಿ ಮಾಡುತ್ತಿರುವಾಗ ತ್ರಿಶೂಲ್ ಟಾಕೀಸ್ ಎದುರಿಗೆ ಗಲಾಟೆ ಆಗುತ್ತಿರುವುದನ್ನು ನೋಡಿ ಗಮನಿಸಿದಾಗ ಅಲ್ಲಿ ಆರೋಪಿತರಿಬ್ಬರು ಓರ್ವ ವ್ಯಕ್ತಿಯನ್ನು ಮು.ಮಾ.7 ಬೈಕಿನ ಮೂಲಕ ಅಡ್ಡಗಟ್ಟಿ ತಡೆದು ನಿಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು ನೋಡುತ್ತಿದ್ದಂತೆ ಆರೋಪಿತರಿಬ್ಬರು ಸದರಿ ವ್ಯಕ್ತಿಯ ಮೇಲೆ ಮು.ಮಾ.5 ರಿಂದ ಕೊಲೆ ಮಾಡುವ ಉದ್ದೇಶದಿಂದ ಹಲ್ಲೆ ಮಾಡಿ ಆತನ ಬೆನ್ನಿಗೆ ಮತ್ತು ಭುಜಕ್ಕೆ ಚುಚ್ಚಿರುತ್ತಾರೆ ಎಂದರೆ ಸರಿಯಲ್ಲ. ನಾನು ಅಲ್ಲಿ ಹೋಗುವಷ್ಟರಲ್ಲಿ ಆರೋಪಿತರು ಮು.ಮಾ.7 ರ ಮೂಲಕ ಓಡಿ ಹೋಗಿದ್ದು, ಆ ಪೂರ್ವದಲ್ಲಿ ಸದರಿ ಗಾಯಾಳುವಿಗೆ ಕೊಲ್ಲುವುದಾಗಿ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ನಾನು ಗಮನಿಸಿದಾಗ ಸದರಿ ಗಾಯಾಳು ಮು.ಮಾ.1 ಮತ್ತು ಮು.ಮಾ.3 ನ್ನು ಧರಿಸಿದ್ದು, ಅವುಗಳಿಗೂ ಕೂಡ ರಕ್ತ

ತಾಗಿರುತ್ತದೆ ಎಂದರೆ ಸರಿಯಲ್ಲ. ತದನಂತರ ಸದರಿ ಗಾಯಾಳುವನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ ಎಂದರೆ ಸರಿಯಲ್ಲ. ನಂತರ ಈ ಕುರಿತಾಗಿ ಪೋಲೀಸರು ವಿಚಾರಣೆಗಾಗಿ ಸ್ಥಳಕ್ಕೆ ಬಂದಿದ್ದು, ಆಗ ನಾನು ಈಗ ಓದಿ ಹೇಳಿದಂತೆ ನನ್ನ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿ.ಪಿ.14 ಎಂದು ಗುರುತಿಸಲಾಯಿತು. ಈ ಘಟನೆಯನ್ನು ನಾನು ಕಣ್ಣಾರೆ ನೋಡಿದ್ದರೂ ಕೂಡ ಈಗ ಆರೋಪಿತರಿಗೆ ಸಹಾಯವಾಗಲು ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಆರೋಪಿತರ ಪರ ವಕೀಲರಿಂದ.**

ಇರುವುದಿಲ್ಲ.

ಮರುವಿಚಾರಣೆಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ . ಹೇ. ಕೇ. ಸರಿಯಾಗಿದೆ.

PRAVEEN KUMAR RAGHAV NAIK

Digitally signed by PRAVEEN KUMAR RAGHAV NAIK
Date: 2025.09.22 10:59:19 +0530

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದಾವಣಗೆರೆ.